ಒಎಫ್‌ಸಿ ಅಳವಡಿಕೆ

1281(1606); ಶ್ರೀ ಹ್ಯಾರೀಸ್ ಎನ್.ಎ

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒ.ಎಫ್.ಸಿ ಅಳವಡಿಕೆಯ ಕುರಿತು ಇರುವ ಕಾನೂನು ನಿಯಮ ನಿಬಂಧನೆಗಳೇನು; ಅದನ್ನು ಒಎಫ್‌ಸಿ ಕಂಪನಿಗಳು ಅನುಸರಿಸುತ್ತಿವೆಯೇ; ಹಾಗಿದ್ದಲ್ಲಿ ಈ ಕುರಿತಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನಿಯಂತ್ರಣ ಕ್ರಮಗಳೇನು;

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒ.ಎಫ್.ಸಿ ತನಿಖಾ ಸಮಿತಿ ವರದಿಯ ಮುಖ್ಯಾಂಶಗಳೇನು; ಈ ವರದಿಯನ್ವಯ ಕೈಗೊಂಡ ಕ್ರಮಗಳೇನು;

ಇ) ಒ.ಎಫ್.ಸಿ ಸಂಸ್ಥೆಗಳು ಬಳಸಿಕೊಂಡು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಸ್ತೆಗಳ ಜಾಗದ ಮೌಲ್ಯದ ಅಂದಾಜು ಬೆಲೆ ಮತ್ತು ಅದಕ್ಕಾಗಿ ಸದರಿ ಸಂಸ್ಥೆಗಳು ಪಾವತಿಸುತ್ತಿರುವ ತೆರಿಗೆ ಎಷ್ಟು (ವಿವರ ನೀಡುವುದು)

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಒ.ಎಫ್.ಸಿ ಅಳವಡಿಕೆಗೆ ಸಂಬಂಧಿಸಿದಂತೆ ಪಾಲಿಕೆ ಸಭೆಯ ವಿಷಯದ ಸಂಖ್ಯೆ: 152/2012–13, ದಿನಾಂಕ: 11–07–2012 ರ ನಿರ್ಣಯದಂತೆ ಅಳವಡಿಕೆ ಶುಲ್ಕ ಪ್ರತಿ ಗುಂಡಿಗೆ ₹ 30,000/– ಪ್ರತಿ ಮೀಟರ್ ಗೆ ₹ 600/– ಇದರಲ್ಲಿ ಯಾವುದು ಅಧಿಕವೋ ಅದರಂತೆ ಶುಲ್ಕ ವಿಧಿಸಿ ಭದ್ರತಾ ಠೇವಣಿ ಅಳವಡಿಕೆ ಶುಲ್ಕದ ಶೇಕಡ 25% ಅಂದರೆ ಪ್ರತಿ ಮೀಟರ್‌ಗೆ ₹ 150/– ಗಳನ್ನು ವಿಧಿಸಲಾಗುತ್ತದೆ. ಹಾಗೂ, ಅಗೆದ ರಸ್ತೆಯ ದುರಸ್ಥಿಯನ್ನು ಸಂಬಂಧಿಸಿದ ಸೇವಾ ಸಂಸ್ಥೆಗಳೇ ನಿರ್ವಹಿಸುವಂತೆ ಷರತ್ತು ವಿಧಿಸಿ ಓ.ಎಫ್.ಸಿ ಅಳವಡಿಕೆಗೆ ಅನುಮತಿ ನೀಡಲಾಗುತ್ತಿದೆ.

ಅನಧಿಕೃತ ಕೇಬಲ್‌ಗಳನ್ನು ತೆರವುಗೊಳಿಸಲು ಹಾಗೂ ಓ.ಎಫ್.ಸಿ ಅಳವಡಿಕೆಗೆ ಶುಲ್ಕ ಅಥವಾ ಬಾಡಿಗೆ ವಿಧಿಸಲು ಅನುವಾಗುವಂತೆ ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ಸ್ ಅಧಿನಿಯಮ 1976 ಕ್ಕೆ ದಿನಾಂಕ: 20-08-2013 ರಂದು ತಿದ್ದುಪಡಿ ಮಾಡಿ, ಕಲಂ 58(20-ಎ) ಹಾಗೂಕಲಂ 423(ಬಿ.ಬಿ)ಯನ್ನು ಸೇರ್ಪಡೆಗೊಳಿಸಿ ಅಧಿಸೂಚನೆ ಹೊರಡಿಸಲಾಗಿದೆ.

ಅದರಂತೆ ಓ.ಎಫ್.ಸಿ ಅಳವಡಿಕೆಯನ್ನು ನಿಯಂತ್ರಿಸಲು ನೀತಿ ನಿಯಮಾವಳಿಗಳನ್ನು ರಚಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಅಳವಡಿಸಿರುವ ಓ.ಎಫ್.ಸಿ ಕುರಿತಂತೆ ಕೂಲಂಕಷವಾಗಿ ಪರಿಶೀಲಿಸಲು ಪಾಲಿಕೆಗೆ ಉಂಟಾಗಿರುವ ನಷ್ಟದ ಬಗ್ಗೆ ಪೂರ್ಣ ಪ್ರಮಾಣದ ವರದಿಯನ್ನು ತಯಾರಿಸಲು ಮಹಾಪೌರರ ಅಧ್ಯಕ್ಷತೆಯಲ್ಲಿ ಓ.ಎಫ್.ಸಿ ಸಮಿತಿಯೊಂದನ್ನು ರಚಿಸಲಾಗಿದೆ. ಆಪ್ಟಿಕಲ್ ಫೈಬರ್ ಕೇಬಲ್ ಅಳವಡಿಕೆಗೆ ಹಾಗೂ ನಿಯಂತ್ರಣಕ್ಕೆ ಸಂಬಂಧಿಸಿದಂತೆ ರಾಜ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 37882-37893/2011 ರಲ್ಲಿ ನೀಡಿರುವ ತೀರ್ಪಿನಂತೆ ನೀತಿ ನಿಯಮಾವಳಿಗಳನ್ನು ರಚಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಆ) ಓ.ಎಫ್.ಸಿ ತನಿಖಾ ಸಮಿತಿಯ ಮಧ್ಯಂತರ ವರದಿಯ ಮುಖ್ಯಾಂಶಗಳನ್ನು ಅನುಬಂಧ ದಲ್ಲಿ ಒದಗಿಸಿದೆ. ಸದರಿ ಸಮಿತಿಯು ಅಂತಿಮ ವರದಿ ಸಲ್ಲಿಸಿದ ನಂತರ ಕ್ರಮವಹಿಸಲಾಗುವುದು.

ಇ) ಓ.ಎಫ್.ಸಿ ಸಂಸ್ಥೆಗಳು ಬಳಸಿಕೊಂಡಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಸ್ತೆಗಳ ಜಾಗದ ಬೆಲೆಯನ್ನು ಅಂದಾಜಿಸಿರುವುದಿಲ್ಲ.

ಓ.ಎಫ್.ಸಿ ಅಳವಡಿಕೆಗೆ ಪಾಲಿಕೆಯ ಕೌನ್ಸಿಲ್ ವಿಷಯ ಸಂಖ್ಯೆ: 152/2012-13, ದಿನಾಂಕ: 11-07-2012 ರಂದು ತೆಗೆದುಕೊಂಡಿರುವ ನಿರ್ಣಯದಂತೆ, ಪ್ರತಿ ಗುಂಡಿಗೆ ₹ 30,000/- ಗಳು, ಪ್ರತಿ ಮೀಟರ್‌ಗೆ

₹ 600/– ಗಳಂತೆ ಇವುಗಳಲ್ಲಿ ಯಾವುದು ಅಧಿಕವೋ ಅದರಂತೆ ಅಳವಡಿಕೆ ಶುಲ್ಕ ವಿಧಿಸಿ ಮತ್ತು ಹಿಂದಿರುಗಿಸಬೇಕಾದ ಠೇವಣಿ ಹಣ ಅಳವಡಿಕೆ ಶುಲ್ಕದ ಶೇ. 25% ಅಂದರೆ ಪ್ರತಿ ಮೀಟರ್‌ಗೆ ₹ 150/– ಗಳನ್ನು ಪಾವತಿಸಿಕೊಂಡು ಓ.ಎಫ್.ಸಿ ಅಳವಡಿಕೆಗೆ ಅನುಮತಿಯನ್ನು ನೀಡಲಾಗುತ್ತಿದೆ.

ವಿಧಾನಸಭಾ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ 1606ಕ್ಕೆ ಅನುಬಂಧ–1

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಓ.ಎಫ್.ಸಿ ತನಿಖಾ ಮಧ್ಯಂತರ ವರದಿಯ ಮುಖ್ಯಾಂಶಗಳು:

ಸಲಹೆಗಳು ಮತ್ತು ಪರಿಹಾರಗಳು :–

a) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಎಲ್ಲಾ ರಸ್ತೆಗಳಲ್ಲಿ Optical Fiber Cable Providers ಗಳು ಅಧಿಕೃತವಾಗಿ ಮತ್ತು ಅನಧಿಕೃತವಾಗಿ ಅಳವಡಿಸಿರುವ ಸುಮಾರು 65,000 ಕಿ.ಮೀ. ಗಳಿಗಿಂತಲೂ ಹೆಚ್ಚು ಉದ್ದದ Optical Fiber Cable Duct ಗಳ ಪೈಕಿ ಸದರಿ Service Providers ಗಳು ಘೋಷಿಸಿರುವಂತಹ ಅಧಿಕೃತ Optical Fiber Cable Duct ಗಳನ್ನು ಅನಧಿಕೃತವೆಂದು ಪರಿಗಣಿಸಿ, ಅವುಗಳಿಗೆ ಪಾಲಿಕೆಯು ನಿಗದಿಪಡಿಸಿರುವ ROW ಶುಲ್ಕದ ದುಪ್ಪಟ್ಟು ಹಣವನ್ನು ದಂಡದ ರೂಪದಲ್ಲಿ ಪಾವತಿಸಿಕೊಳ್ಳಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು.

b) ಪಾಲಿಕೆಯಿಂದ ಇಲ್ಲಿಯವರೆಗೆ ಯಾವುದೇ ಅನುಮತಿಯನ್ನೂ ಪಡೆದುಕೊಳ್ಳದೇ, ಶುಲ್ಕವನ್ನೂ ಪಾವತಿಸದೇ ಅನಧಿಕೃತವಾಗಿ ಮತ್ತು ಕಾನೂನು ಬಾಹಿರವಾಗಿ, ಮರಗಳಿಂದ ಮರಗಳಿಗೆ ವಿದ್ಯುತ್ ಕಂಬಗಳಿಗೆ ಮತ್ತು ದೂರವಾಣಿ ಕಂಬಗಳಿಗೆ ತೂಗು ಹಾಕಿದಂತಹ ಸ್ಥಿತಿಯಲ್ಲಿ Overhead Optical Fiber Cable ಗಳನ್ನು ಅಳವಡಿಸಿರುವ ಎಲ್ಲಾ Internet Service Providers ಗಳಿಗೆ ಯಾವುದೇ

ಮುನ್ಸೂಚನೆಯನ್ನೂ ಸಹ ನೀಡದೇ, ನಿರ್ದಾಕ್ಷಿಣ್ಯವಾಗಿ ಅವುಗಳನ್ನು ಕತ್ತರಿಸಿ ಹಾಕುವ ಕಾರ್ಯಕ್ಕೆ ಚಾಲನೆ ನೀಡಬೇಕು.

ಪಾಲಿಕೆಯ ವ್ಯಾಪ್ತಿಯಲ್ಲಿ ಈಗಾಗಲೇ 10,000 ಕಿ.ಮೀ. ಗಳಿಗಿಂತಲೂ ಹೆಚ್ಚಿನ ಉದ್ದದ Overhead Optical Fiber Cable ಗಳನ್ನು ಅಳವಡಿಸಿರುವ ಈ Internet Service Providers ಗಳಿಗೆ ಕೂಡಲೇ ನೋಟೀಸ್‌ಅನ್ನು ಜಾರಿ ಮಾಡಿ ತಾವು ಅಳವಡಿಸಿರುವಂತಹ Overhead Optical Fiber Cable ಗಳನ್ನು ರಸ್ತೆಗಳ ಕೆಳಭಾಗದಲ್ಲಿ ಅಳವಡಿಸಿಕೊಳ್ಳುವಂತೆಯೂ ಮತ್ತು ಅದಕ್ಕೆಂದು ಪಾಲಿಕೆಯು ನಿಗದಿಪಡಿಸಿರುವ ROW ಶುಲ್ಕವನ್ನು ಪಾವತಿಸಿಬೇಕೆಂದೂ, ಅದಕ್ಕಾಗಿ ನಿಗದಿತ ಗಡುವನ್ನೂ ನೀಡುವತ್ತ ಗಮನಹರಿಸಬೇಕು.

c) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಅಳವಡಿಸಿರುವ ಒಳಚರಂಡಿ ಕೊಳವೆಗಳಲ್ಲಿ ಈಗಾಗಲೇ 1700 ಕಿ.ಮೀ.ಗಳಿಗಿಂತಲೂ ಹೆಚ್ಚು ಉದ್ದದ Optical Fiber Cable Duct ಗಳನ್ನು ಹಾದು ಹೋಗುವಂತೆ ಅಳವಡಿಸಿರುವ ಎಲ್ಲಾ Optical Fiber Cable Service Providers ಗಳ ವಿರುದ್ಧ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇಲಾಖೆಗೆ ಶಿಫಾರಸ್ಸು ಮಾಡುವುದು.

ಈಗಾಗಲೇ Optical Fiber Cable Service Providers ಗಳು ಹಾಳು ಮಾಡಿರತುವಂತಹ ಒಳಚರಂಡಿ ಕೊಳವೆಗಳು ಮತ್ತು Manhole Chamber ಗಳನ್ನು ಬದಲಾಯಿಸಲು ಮತ್ತು ಪುನರ್‌ನಿರ್ಮಾಣ ಮಾಡಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕಳೆದ 10 ವರ್ಷಗಳಲ್ಲಿ ಸುಮಾರು 270 ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ವೆಚ್ಚ ಮಾಡಿರುವುದರಿಂದ, ಆ ಹಣವನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿನ ಬಡ್ಡಿ ದರದಂತೆ, ಬಡ್ಡಿ ಸಹಿತ

ಹಣವನ್ನು ನಿರ್ದಾಕ್ಷಿಣ್ಯವಾಗಿ ವಸೂಲಿ ಮಾಡಿಕೊಳ್ಳುವಂತೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇಲಾಖೆಗೆ ಸೂಚನೆಯನ್ನು ನೀಡುವುದು.

d) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಸುಮಾರು 6,500 ಕಿ.ಮೀ.ಗಳಿಗಿಂತಲೂ ಹೆಚ್ಚು ಉದ್ದದ ರಸ್ತೆಗಳನ್ನು Optical Fiber Cable Duct ಗಳ ಅಳವಡಿಕೆಗಾಗಿ ಬಳಸಿಕೊಂಡಿರುವ ಎಲ್ಲಾ Optical Fiber Cable Service Providers ಗಳಿಂದ, ಸದರಿ ರಸ್ತೆಗಳ ಪುನಶ್ಚೇತನಕ್ಕೆ ಪಾಲಿಕೆಯು ಈಗಾಗಲೇ ವೆಚ್ಚ ಮಾಡಿರುವ ಹಣವನ್ನು ದಂಡ ಸಹಿತ ವಸೂಲಿ ಮಾಡುವ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು.

e) ಪಾಲಿಕೆಯಿಂದ ಅಧಿಕೃತವಾಗಿ ಅನುಮತಿಯನ್ನು ಪಡೆದುಕೊಂಡ ಸಂಸ್ಥೆಯು ಅಳವಡಿಸಿರುವ Optical Fiber Cable Duct ಸಂಸ್ಥೆಗಳ ಜೊತೆಯಲ್ಲಿ ಅನಧಿಕೃತವಾಗಿ ಬೇರೆ ಸಂಸ್ಥೆಗಳ Optical Fiber Cable Duct ಗಳನ್ನು ಅಳವಡಿಸಿರುವುದು ಸತ್ಯ ಸಂಗತಿಯಾಗಿರುವುದರಿಂದ, ಇಂತಹ ಅನಧಿಕೃತ Optical Fiber Cable Duct ಗಳನ್ನು ಪಾಲಿಕೆಯು ತಮ್ಮ ಸುಪರ್ದಿಗೆ ತೆಗೆದುಕೊಳ್ಳುವತ್ತ ದಿಟ್ಟ ಕ್ರಮ ತೆಗೆದುಕೊಳ್ಳಬೇಕು.

f) ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಾದ BSNL, BESCOM, KPTCL ಸಂಸ್ಥೆಗಳು Optical Fiber Cable Duct ಗಳ ಅಳವಡಿಕೆಗೆಂದು ಪಾಲಿಕೆಯಿಂದ ಪಡೆದುಕೊಳ್ಳುವ ಅನುಮತಿಯನ್ನು ದುರುಪಯೋಗ ಪಡಿಸಿಕೊಂಡು, ಆ ಸಂಸ್ಥೆಗಳ Optical Fiber Cable Duct ಗಳನ್ನು ಅಳವಡಿಸುವ ಗುತ್ತಿಗೆದಾರರೊಂದಿಗೆ ಶಾಮೀಲಾಗಿ ಮೂರ್ನಾಲ್ಕು Optical Fiber Cable Duct ಗಳನ್ನು ಅಳವಡಿಸಿರುವ ಖಾಸಗಿ Optical Fiber Cable Service Providers ಗಳ ವಿರುದ್ಧ ಕಾನೂನು ರೀತ್ಯಾ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

g) ಆರ್ಟಿರಿಯಲ್ ಮತ್ತು ಸಬ್ ಆರ್ಟಿರಿಯಲ್ ರಸ್ತೆಗಳಲ್ಲಿ ಕಾನೂನು ಬಾಹಿರವಾಗಿ Manhole Chambers ಗಳನ್ನು ಅಥವಾ Inspection Box ಗಳನ್ನು ಅಳವಡಿಸುವ / ಅಳವಡಿಸುತ್ತಿರುವ ಎಲ್ಲಾ ಸಂಸ್ಥೆಗಳ ವಿರುದ್ಧ ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಅಲ್ಲದೇ, ಪಾದಚಾರಿ ಮಾರ್ಗಗಳಲ್ಲಿ ಮತ್ತು ಆರ್ಟಿರಿಯಲ್ ಮತ್ತು ಸಬ್ ಆರ್ಟಿರಿಯಲ್ ರಸ್ತೆಗಳಲ್ಲಿ ಅಳವಡಿಸಿರುವಂತಹ ಎಲ್ಲಾ Manhole Chambers ಗಳನ್ನು ಅಥವಾ Inspection Box ಗಳನ್ನು ತೆರವುಗೊಳಿಸಿ, ಆ ಭಾಗದ ಪುನಶ್ಚೇತನಾ ಕಾರ್ಯಕ್ಕೆ ತಗಲುವ ವೆಚ್ಚವನ್ನು ಆಯಾ Optical Fiber Cable Service Providers ಗಳಿಂದಲೇ ದಂಡ ಸಹಿತ ವಸೂಲಿ ಮಾಡಬೇಕು.

h) ಬೆಂಗಳೂರು ಮಹಾನಗರ ಎಲ್ಲಾ ಮನೆಗಳಿಗೂ ನೇರವಾಗಿ ಅಡುಗೆ ಅನಿಲವನ್ನು ಪೂರೈಸುವ ಯೋಜನೆಗೆ ಸಂಬಂಧಿಸಿದಂತೆ M/s GAIL (India) Ltd. ಸಂಸ್ಥೆಯು ನಗರದ ಎಲ್ಲಾ ರಸ್ತೆಗಳಲ್ಲಿ ಅನಿಲ ಸಂಪರ್ಕ ಕೊಳವೆಗಳನ್ನು, ಅದರೊಂದಿಗೆ Optical Fiber Cable Duct ಗಳನ್ನೂ ಸಹ ಅಳವಡಿಸುತ್ತಿದ್ದು, ಅಂತಹ ರಸ್ತೆಗಳನ್ನು ತಮಗಿಷ್ಟ ಬಂದ ಹಾಗೆ ಅಗೆಯುತ್ತಿರುವುದರಿಂದ, ಈ ಸಂಸ್ಥೆಗೆ ಪಾಲಿಕೆಯು ಕೂಡಲೇ ನೋಟಿಸ್‌ಅನ್ನು ಜಾರಿ ಮಾಡಿ, ಪಾಲಿಕೆಯು ನಿಗದಿ ಪಡಿಸಿದ ROW ಶುಲ್ಕವನ್ನು ಸೂಕ್ತ ರೀತಿಯಲ್ಲಿ ಪಾವತಿ ಮಾಡಬೇಕೆಂದು ತಿಳಿಸುವುದು ಹಾಗೂ ಪಾಲಿಕೆಯು ಮುಂದೆ ನಿಗದಿ ಪಡಿಸುವಂತಹ ಮಾಸಿಕ / ವಾರ್ಷಿಕ ನೆಲಬಾಡಿಗೆಯನ್ನು ಪಾವತಿಸುತ್ತೇವೆ ಎಂಬ ಪ್ರಮಾಣ ಪತ್ರವನ್ನು ಪಡೆದುಕೊಳ್ಳುವುದು.

i) Optical Fiber Cable Duct ಗಳ ಅಳವಡಿಕೆಗೆ ಮಾಸಿಕ / ವಾರ್ಷಿಕ ನೆಲಬಾಡಿಗೆ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯ ಉಚ್ಚ ನ್ಯಾಯಾಲಯದ ಆದೇಶದಂತೆ, ಈಗಾಗಲೇ Karnataka Muncipal Corporations Act,

1976 (Karnataka Act 14 of 1977) ರ Section 58 ಮತ್ತು Section 423 ಕ್ಕೆ ತಿದ್ದುಪಡಿ ಮಾಡಲಾಗಿರುವುದು ಸರಿಯಷ್ಟೇ.

ಹಾಗೆಯೇ, ಅಕ್ರಮ Optical Fiber Cable Duct ಗಳ ಅಳವಡಿಕೆ ದಂಧೆಗೆ ಕಡಿವಾಣ ಹಾಕುವ ಸಂಬಂಧ ಪಾಲಿಕೆಯು ಕಾನೂನು ರೀತ್ಯಾ Bye-Law (ಉಪ ವಿಧಿ / ಉಪ ಕಾನೂನು) ವನ್ನು ಮಾಡಿಕೊಳ್ಳುವ ಬಗ್ಗೆ ತಕ್ಷಣವೇ ಸೂಕ್ತ ಕ್ರಮ ತೆಗೆದುಕೊಳ್ಳುವುದು.

j) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಯಾವುದೇ ಅನುಮತಿಯನ್ನು ಪಡೆದುಕೊಳ್ಳದೇ, ನಿಗದಿತ ಶುಲ್ಕವನ್ನೂ ಪಾವತಿಸದೇ, ಕಾನೂನು ಬಾಹಿರವಾಗಿ ಅಳವಡಿಸಲ್ಪಟ್ಟಿರುವ ಸುಮಾರು 7,000 ಕಿ.ಮೀ.ಗಳಿಗಿಂತಲೂ ಹೆಚ್ಚು ಉದ್ದದ Copper Cable ಗಳನ್ನು ಕೂಡಲೇ ತೆರವುಗೊಳಿಸುವುದು ಅಥವಾ ಸದರಿ Copper Cable ಗಳನ್ನು ಅಳವಡಿಸಿರುವ ಸಂಸ್ಥೆಗಳಿಂದ ಪಾಲಿಕೆಯು ನಿಗದಿ ಪಡಿಸಿರುವ ROW ಶುಲ್ಕವನ್ನು ದುಪ್ಪಟ್ಟು ದಂಡದೊಂದಿಗೆ ಪಾವತಿಸಿಕೊಳ್ಳುವತ್ತ ಸೂಕ್ತ ಕ್ರಮ ತೆಗೆದುಕೊಳ್ಳುವುದು.

ಹಾಗೆಯೇ, ಮುಂದೆ ಪಾಲಿಕೆಯು ನಿಗದಿ ಪಡಿಸುವಂತಹ ಮಾಸಿಕ / ವಾರ್ಷಿಕ ನೆಲಬಾಡಿಗೆಯನ್ನು ಪಾವತಿಸುತ್ತೇವೆ ಎಂಬ ಪ್ರಮಾಣ ಪತ್ರವನ್ನು ಸದರಿ ಸಂಸ್ಥೆಗಳಿಂದ ಪಡೆದುಕೊಳ್ಳುವುದು.

k) Mobile Networks ಹೊರತುಪಡಿಸಿ, ಕೇವಲ Broadband, Internet ಸೇವೆಯನ್ನು ಮಾತ್ರ ನೀಡುತ್ತಿರುವ RJIL ಸಂಸ್ಥೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ರಸ್ತೆಗಳಲ್ಲಿ, ಪಾದಚಾರಿ ಮಾರ್ಗಗಳಲ್ಲಿ Optical Fiber Cable Duct ಗಳನ್ನು Manhole Chambers ಗಳನ್ನು / Inspection Box ಗಳನ್ನು ಅಳವಡಿಸುತ್ತಿದ್ದು, ಈಗಾಗಲೇ ಪಾಲಿಕೆಯ ವ್ಯಾಪ್ತಿಯಲ್ಲಿ 7,000 ಕಿ.ಮೀ.ಗಳಿಗಿಂತಲೂ ಹೆಚ್ಚು ಉದ್ದದ Optical Fiber Cable Duct ಗಳನ್ನು ಮತ್ತು ಸುಮಾರು 3000 ಕ್ಕಿಂತಲೂ ಹೆಚ್ಚು Manhole Chambers ಗಳನ್ನು / Inspection

Box ಗಳನ್ನು ಅಳವಡಿಸಿರುವುದು ಸರಿಯಷ್ಟೇ. ಈ 7000 ಕಿ.ಮೀ. ಗಳಿಗಿಂತಲೂ ಹೆಚ್ಚು ಉದ್ದದ ರಸ್ತೆಗಳನ್ನು ಮತ್ತು 3000 ಕ್ಕಿಂತಲೂ ಹೆಚ್ಚು ಗುಂಡಿಗಳನ್ನು ಪುನಶ್ಚೇತನಗೊಳಿಸಲು ಮತ್ತು ಮರು ಡಾಂಬರೀಕರಣಗೊಳಿಸಲು ಅಗತ್ಯವಿರುವ ಕನಿಷ್ಟ 300 ಕೋಟಿ ರೂಪಾಯಿಗಳನ್ನು RJIL ಸಂಸ್ಥೆಯಿಂದಲೇ ವಸೂಲಿ ಮಾಡುವ .ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದು.

l) Television Service Providers ಗಳ ಹೆಸರಿನಲ್ಲಿ Overhead Optical Fiber Cable ಗಳನ್ನು ಅಳವಡಿಸಿ, ಆ ಮುಖೇನ Telecommunications Service ಗಳನ್ನು ನೀಡುತ್ತಿರುವ ಎಲ್ಲಾ Internet Service Providers ಗಳ ವಿರುದ್ಧ ಕೂಡಲೇ ಕಾನೂನು ರೀತ್ಯಾ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವುದು ಮತ್ತು ಈ Internet Service Providers ಗಳು ಈಗಾಗಲೇ ಅಳವಡಿಸಿರುವಂತಹ ಸುಮಾರು 10,000 ಕಿ.ಮೀ. ಗಳಿಗಿಂತಲೂ ಹೆಚ್ಚು ಉದ್ದದ Overhead Optical Fiber Cable ಗಳನ್ನು ತೆರವುಗೊಳಿಸಿ, ಅವುಗಳನ್ನು ಕಾನೂನು ರೀತ್ಯಾ ಪಾಲಿಕೆಯಿಂದ ಅನುಮತಿಯನ್ನು ಪಡೆದು ಮತ್ತು ನಿಗದಿತ ROW ಶುಲ್ಕವನ್ನು ಪಾವತಿಸಿ HDD ವಿಧಾನದಲ್ಲಿ ನೆಲದ ಒಳಗೆ ಅಳವಡಿಸಿಕೊಳ್ಳುವಂತೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡುವ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು.

m) ಭವಿಷ್ಯದಲ್ಲಿ ತಮ್ಮ ವ್ಯಾವಹಾರಿಕ ವಿಸ್ತರಣೆಯನ್ನು ಗಮನದಲ್ಲಿಟ್ಟುಕೊಂಡು, ದುರಾಲೋಚನೆಯಿಂದ ತಾವು ಅನಧಿಕೃತವಾಗಿ ಅನುಮತಿ ಪಡೆದುಕೊಂಡ Optical Fiber Cable Duct ಗಳ ಜೊತೆಗೆ 03 ರಿಂದ 04 ಖಾಲಿ Optical Fiber Cable Duct ಗಳನ್ನು ಈಗಾಗಲೇ ಅಳವಡಿಸಿರುವ Optical Fiber Cable Service Providers ಗಳಿಂದ ಇಂತಹ ಎಲ್ಲಾ ಅನಧಿಕೃತ ಖಾಲಿ Optical Fiber Cable Duct ಗಳಿಗೆ ದುಪ್ಪಟ್ಟು ದಂಡ ಸಹಿತ ROW ಶುಲ್ಕವನ್ನು ಪಾವತಿಸಿಕೊಳ್ಳಬೇಕು.

ಈಗಾಗಲೇ, ಈ ಎಲ್ಲಾ ಖಾಲಿ Optical Fiber Cable Duct ಗಳನ್ನೂ ಸಹ ತಮ್ಮ ಆಸ್ತಿ (Assets) ಗಳೆಂದು ಈ ಸಂಸ್ಥೆಗಳು ಘೋಷಣೆ ಮಾಡಿಕೊಂಡಿರುವುದರಿಂದ, ಕಡ್ಡಾಯವಾಗಿ ಇಂತಹ ಖಾಲಿ Optical Fiber Cable Duct ಗಳಿಗೆ ROW ಶುಲ್ಕವನ್ನು ಪಾವತಿಸಿಕೊಳ್ಳಬೇಕು ಅಥವಾ ಈ Optical Fiber Cable Service Providers ಗಳು ಅಧಿಕೃತವಾಗಿ ಘೋಷಿಸಿರುವ Optical Fiber Cable Duct ಗಳ ಪ್ರಮಾಣವನ್ನು ಹೊರತುಪಡಿಸಿ ಉಳಿದ ಖಾಲಿ Optical Fiber Cable Duct ಗಳನ್ನು ಪಾಲಿಕೆಯು ತನ್ನ ಸುಪರ್ದಿಗೆ ತೆಗೆದುಕೊಂಡು, ಅವುಗಳನ್ನು ಮೀಟರ್‌ಗಳ ಲೆಕ್ಕಾಚಾರದಲ್ಲಿ ಬೇರೆ Optical Fiber Cable Service Providers ಗಳಿಗೆ ಪಾಲಿಕೆಯು ಬಹಿರಂಗ ಹರಾಜನ್ನು ಹಾಕಬೇಕು. ಈ ರೀತಿ ಮಾಡಿದಾಗ ಪಾಲಿಕೆಗೆ ನೂರಾರು ಕೋಟಿ ರೂಪಾಯಿಗಳ ಆದಾಯ ಬರುತ್ತದೆ.

n) ಪಾಲಿಕೆಯಿಂದ ಅಧಿಕೃತವಾಗಿ ಅನುಮತಿಯನ್ನು ಪಡೆದುಕೊಂಡ ಸಂಸ್ಥೆಯು Optical Fiber Cable Duct ಗಳನ್ನು ಅಳವಡಿಸುವ ಜೊತೆಗೆ ಅಕ್ರಮವಾಗಿ ಬೇರೆ ಸಂಸ್ಥೆಗಳ Optical Fiber Cable Duct ಗಳನ್ನೂ ಅಳವಡಿಸಿ, ಪಾಲಿಕೆಗೆ ನೂರಾರು ಕೋಟಿ ರೂಪಾಯಿಗಳ ನಷ್ಟವನ್ನು ಉಂಟುಮಾಡಿರುವ / ಮಾಡುತ್ತಿರುವ, ಈ Optical Fiber Cable Duct ಗಳನ್ನು ಅಳವಡಿಸುತ್ತಿರುವ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸುವ ಸಂಬಂಧ ಪಾಲಿಕೆಯು ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳುವುದು.

o) ಕಾನೂನು ರೀತ್ಯಾ ನೆಲಮಟ್ಟದಿಂದ 4 ಅಡಿಗಳ ಆಳದಲ್ಲಿ Optical Fiber Cable Duct ಗಳನ್ನು ಅಳವಡಿಸುವ ಬದಲು, ಹಣವನ್ನು ಉಳಿಸಲು ಮತ್ತು HDD ಯಂತ್ರಗಳ ಬಾಡಿಗೆಯನ್ನು ಉಳಿಸಲು ರಸ್ತೆಯ ಮೇಲ್ಭಾಗದಿಂದ ಕೇವಲ 01 ರಿಂದ 1.5 ಅಡಿಗಳಷ್ಟು ಆಳದಲ್ಲಿ Optical Fiber Cable Duct ಗಳನ್ನು ಅಳವಡಿಸಿ, ಆ ಮುಖೇನ ಸಾವಿರಾರು ಕಿ.ಮೀ.ಗಳಷ್ಟು ಉದ್ದದ ರಸ್ತೆಗಳು ಹಾಳಾಗಲು

ಕಾರಣಕರ್ತರಾಗಿರುವ ಎಲ್ಲಾ Optical Fiber Cable Duct ಗಳನ್ನು ಅಳವಡಿಸುವ ಗುತ್ತಿಗೆದಾರರಿಂದ ಸದರಿ ರಸ್ತೆಗಳ ಪುನಶ್ಚೇತನಕ್ಕೆ ಮಾಡಿರುವ / ಮಾಡಬೇಕಿರುವ ವೆಚ್ಚವನ್ನು ದಂಡ ಸಹಿತ ವಸೂಲಿ ಮಾಡುವುದು.

p) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಹೊಸದಾಗಿ ನಿರ್ಮಾಣ ಮಾಡುವ ಬಡಾವಣೆಗಳ ರಸ್ತೆಗಳು ಮತ್ತು ಪುನರ್ಡಾಂಬರೀಕರಣ ಮಾಡುವ ಎಲ್ಲಾ ರಸ್ತೆಗಳಲ್ಲಿಯೂ ಸಹ ಪಾಲಿಕೆಯು ತಾನೇ, ತನ್ನ ಸ್ವಂತ ಖರ್ಚಿನಲ್ಲಿ ಖಾಲಿ Optical Fiber Cable Duct ಗಳನ್ನು ಅಳವಡಿಸುವುದು ಬಹಳ ಉತ್ತಮವಾಗಿರುತ್ತದೆ. ಖಾಸಗಿ Optical Fiber Cable Service Providers ಗಳು Optical Fiber Cable Duct ಗಳ ಅಳವಡಿಕೆಗೆಂದು ಅರ್ಜಿ ಸಲ್ಲಿಸುವಂತಹ ಸಂದರ್ಭದಲ್ಲಿ ಅವರಿಂದ, ಪಾಲಿಕೆಯು ತಾನೇ ಅಳವಡಿಸಿದಂತಹ ಖಾಲಿ Optical Fiber Cable Duct ಗಳನ್ನು ಬಳಸಿಕೊಳ್ಳಲು ಅವಕಾಶ ನೀಡಬಹುದು. ಇದಕ್ಕೆಂದು ಪಾಲಿಕೆ ಪ್ರತ್ಯೇಕವಾಗಿ ಹೆಚ್ಚಿನ ಶುಲ್ಕವನ್ನೂ ಸಹ ವಿಧಿಸಬಹುದಾಗಿರುತ್ತದೆ.

q) ಪಾಲಿಕೆಯು ಈ ರೀತಿ ಮಾಡಿದಾಗ ಮುಂದೆ ಅನಗತ್ಯವಾಗಿ ರಸ್ತೆಗಳ ಅಗೆತವನ್ನು ತಪ್ಪಿಸಿದಂತಾಗುತ್ತದೆ ಮತ್ತು Optical Fiber Cable Service Providers ಗಳು ಹಾಳು ಮಾಡುವ ರಸ್ತೆಗಳ ಪುನಶ್ಚೇತನಾ ಕಾರ್ಯಕ್ಕೆಂದು ಪಾಲಿಕೆಯು ಈಗ ಮಾಡುತ್ತಿರುವ ನೂರಾರು ಕೋಟಿ ರೂಪಾಯಿಗಳ ಅನಗತ್ಯ ವೆಚ್ಚವನ್ನೂ ಸಹ ಉಳಿಸಬಹುದಾಗಿರುತ್ತದೆ.